ಮೌಂಟ್ ರೋಡಿಗೆ ಕರೆತಂದ. ಮೊಬೈಲ್, ಪರ್ಸು ಅವನಿಗೇ ಕೊಟ್ಟು ಆಗಲೇ ಸರತಿಯಲ್ಲಿ ನಿಂತಿದ್ದ ಜನಗಳ ಜೊತೆಯಲ್ಲಿ ಬೆರೆತೆ. ಹಿಂದೆ ಪ್ರಶಾಂತ, ಪದ್ಮಿನಿ ಟ್ಯಾಕ್ಸಿಯಿಂದಿಳಿದರು. ಪದ್ಮಿನಿ ದುಡ್ಡುಕೊಟ್ಟು ಚಿಲ್ಲರೆಗಾಗಿ ಅವನೊಂದಿಗೆ ತುಸು ಜಗಳವಾಡಿ ಬರುವವರೆಗೂ ಪ್ರಶಾಂತರನ್ನು ವ್ಹೀಲ್‌ಚೇರಿನಲ್ಲಿ ಸುಮಂತನೇ ಮಾತನಾಡುತ್ತ ಕರೆತಂದ. ಅವರೂ ತಮ್ಮ ಕಡತಗಳನ್ನು ಅವನಿಗೆ ತೋರಿಸುತ್ತಿದ್ದರು. ಪದ್ಮಿನಿ ಮರಳಿದೊಡನೆ ಅವರನ್ನು ವಿಶೇಷವಾಗೇ ಒಳಗೆ ಕರೆದೊಯ್ಯಲಾಯಿತು. ಒಂದು ಕ್ಷಣ ಬೇಜಾರಾಯಿತು. ಧರಾಳ ಮದುವೆಯಾದಾಗ ಪ್ರಶಾಂತ ಚೆನ್ನಾಗಿದ್ದರು. ಅದೆಷ್ಟು ಗೌರವಯುತವಾದ ನಡವಳಿಕೆ. ಯಾರ ಮನವನ್ನೂ ನೋಯಿಸದ ಮಾತುಗಳು... ಆರು ತಿಂಗಳ ಹಿಂದೆ ಪಾರ್ಶ್ವವಾಯು ತಗುಲಿ ಒದ್ದಾಡಿದ್ದರು. ಈ ಸ್ಥಿತಿಗೆ ಬಂದಿದ್ದೇ ಹೆಚ್ಚು.

ನಾನೂ ಪಾಸ್‌ಪೋರ್ಟ್, ಅಪಾಯಿಂಟ್‌ಮೆಂಟ್ ಫಾರ್ಮ್ ಹಿಡಿದು ಅವರು ತೋರಿಸಿದ ದಾರಿಯಲ್ಲಿ ಸಾಗಿದೆ. ಹಿಂದಿ, ಇಂಗ್ಲಿಷ್‌ನೊಂದಿಗೆ ಕನ್ನಡದಲ್ಲಷ್ಟೇ ಅಲ್ಲ... ದಕ್ಷಿಣ ಭಾರತದ ಎಲ್ಲಾ ಅಧಿಕೃತ ಭಾಷೆಗಳಲ್ಲಿ ಸಲಹೆ, ಸೂಚನೆಗಳನ್ನು ಅಲ್ಲಲ್ಲಿ ಬರೆದು ಹಾಕಿದ್ದರು. ಮಾನಿಟರ್‌ನಲ್ಲಿ ಕೂಡ ಬರುತ್ತಿದ್ದವು. ನಿನ್ನೆಯ ಘಟನೆಯನ್ನು ನೆನಪಿಸಿಕೊಂಡು ಪದ್ಮಿನಿಗೆ ಅದನ್ನು ತೋರಿಸಬೇಕೆನಿಸಿತು. ಅವರು ಆಗಲೇ ಕುರ್ಚಿಗಳಲ್ಲಿ ಕುಳಿತು ತಮ್ಮ ಸರದಿಗಾಗಿ ಕಾಯುತ್ತಿದ್ದರು. ನನಗೂ 'ವೇಟ್ ಹಿಯರ್' ಎಂದು ಕೈ ತೋರಿಸಿದಾಗ ಮುಂದೆಯೇ ಕುಳಿತೆ. ನನ್ನ ಮುಂದಿನ ಕಿಟಕಿಯಲ್ಲೇ ಪದ್ಮಿನಿ, ಪ್ರಶಾಂತರ ಸರದಿ ಬರಬೇಕೆ? ಸಹಾಯಕ ಪ್ರಶಾಂತರನ್ನು ವ್ಹೀಲ್‌ಚೇರಿನಲ್ಲಿ ಕರೆತಂದ. ಪದ್ಮಿನಿ ಡಾಕ್ಯುಮೆಂಟ್ಸ್ ತೋರಿಸುತ್ತಿದ್ದಂತೆ ಹೆಸರು, ಬರ್ಥ್‌ಡೇಟ್ ಹೇಳಿದರು. ಪ್ರಶಾಂತರನ್ನು ತೋರಿಸಿ ಅವರ ತೊಂದರೆಯನ್ನು ಹೇಳಿ 'ಅವರಿಗೆ ಚಿಕಿತ್ಸೆಯಾಗಬೇಕು' ಎಂದರು. ಪ್ರಶಾಂತರೊಂದಿಗೆ ಮಾತನಾಡಿದ ವಿದೇಶಿ ಆಫೀಸರ್ 'ಅದಕ್ಕೆ ಬೇರೆಯೇ ಪ್ರೊಸೀಜರ್ ಇದೆ' ಎಂದದ್ದು ಕೇಳಿಸಿತು. ಪ್ರಶಾಂತರನ್ನು ಸಹಾಯಕ ದೂರ ಕರೆದೊಯ್ಯುತ್ತಿದ್ದಂತೆ ಪದ್ಮಿನಿಗೆ "ಸ್ವಂತ ಮನೆ ಇದೆಯೇ?..." ಎಂದು ಕೇಳಿದರು. ಪದ್ಮಿನಿ "ಇಲ್ಲ"ವೆಂದಾಗ ನನಗೇ ಅಚ್ಚರಿಯಾಗಿತ್ತು. ಅಷ್ಟು ದೊಡ್ಡ ಸ್ವಂತ ಮನೆ ಇಟ್ಟುಕೊಂಡು... ಇಲ್ಲವೆನ್ನುತ್ತಿದ್ದಾರಲ್ಲ ಅಥವಾ ಬೇರೇನಾರೂ ವಿಷಯವಿರಬಹುದೇ? ಲೋನ್... ಅಥವಾ ಮತ್ತೇನಾದರೂ... ಎಂದು ಯೋಚಿಸುವಷ್ಟರಲ್ಲಿ ಅವರಿಬ್ಬರ ಪಾಸ್‌ಪೋರ್ಟ್ ತಿರುಗಿ ಕೊಡಲಾಗಿತ್ತು. ಅವುಗಳನ್ನು ತೆಗೆದುಕೊಂಡು ವಿಜಯಪತಾಕೆ ಹಾರಿಸಿದಂತೆ ಕೈಬೀಸುತ್ತ... ನಗುತ್ತ ಹೊರನಡೆದರು ಪದ್ಮಿನಿ. ನನ್ನೆದೆ ಡವಡವಿಸಿತು.

ನನಗೇನೂ ಸುಳ್ಳು ಹೇಳಲು ಹೇಳಿರಲಿಲ್ಲ. ನಾನು ಬರುವುದು ಮಗ, ಸೊಸೆಗೆ ಬೇಕಿಲ್ಲವೇನೋ... ಸುಮ್ಮನೆ ಕಣ್ಣೊರೆಸುವ ತಂತ್ರ. ನಿಟ್ಟುಸಿರಿಟ್ಟು ನನ್ನ ಸರದಿಗೆ ಸಿದ್ಧಳಾಗಿ ಅವರು ಕೂಗುತ್ತಲೂ ಕೌಂಟರಿನ ಬಳಿ ನಡೆದೆ.

ಅವೇ ಮಾಮೂಲಿ ಪ್ರಶ್ನೆಗಳು. "ಏತಕ್ಕಾಗಿ ಹೋಗ್ತಾ ಇದೀರಾ? ಯಾರು ಫಂಡಿಂಗ್ ಮಾಡ್ತಾ ಇದಾರೆ?

